ಯಾವುದೋ ಕಾರಣಕ್ಕೆ ದುಃಖವಾದರೆ, ಇನ್ನಾವುದೋ ಕಾರಣ ಮುಂದೊಡ್ಡಿ ಅಳುತ್ತಾಳೆ ಎನ್ನುವುದು ಮಲ್ಲಿಕಾಗೆ ಮತ್ತೊಮ್ಮೆ ಖಾತ್ರಿಯಾಯಿತು! ಯಾಕೆಂದರೆ, ಗೌಡಿಯಾ ನೃತ್ಯದ ಬಗ್ಗೆ ಏನೂ ಗೊತ್ತಿರದ ವ್ಯಕ್ತಿಯೊಬ್ಬ ಬರೆದ ಆ ವಿಮರ್ಶೆಯಲ್ಲಿ ರಂಜಿತಾ ಅಷ್ಟು ಗೋಳಾಡುವಂಥದ್ದು ಏನೂ ಇರಲಿಲ್ಲ. ಮಲ್ಲಿಕಾಗೆ ಅವತ್ತು ವಾರದ ರಜೆಯಿದ್ದುದರಿಂದ ರಂಜಿತಾ ಜೊತೆ ನಾಲ್ಕಾರು ಗಂಟೆ ಕಳೆದಿದ್ದಳು. ಒಂದು ಕೆಟ್ಟ ವಿಮರ್ಶೆ ಕುರಿತು ಶುರುವಾದ ಮಾತು ಒಂದರಿಂದ ಒಂದಕ್ಕೆ ಎತ್ತೆತ್ತಲೋ ಹರಿಯುತ್ತಿದ್ದಂತೆ ರಂಜಿತಾಳ ಅವತ್ತಿನ ಅಳುವಿಗೆ ಎಂದಿನಂತೆ ತೀರಾ ಸಿಕ್ಕುಸಿಕ್ಕಾದ ಕಾರಣಗಳಿರುವುದು ಮಲ್ಲಿಕಾಗೆ ಅರಿವಾಗತೊಡಗಿತು.

ಸಾಮಾನ್ಯವಾಗಿ ರಂಜಿತಾಳ ಬಗೆಬಗೆಯ ದುಮ್ಮಾನಗಳು ರಾತ್ರಿಯ ಹೊತ್ತು ಹೊರಬರುತ್ತಿದ್ದವು. ತನ್ನ ರಿಪೋರ್ಟಿಂಗಿನ ಅಡ್ಡಾಟಗಳಲ್ಲಿ ಮಲ್ಲಿಕಾ ಕಂಡಂತೆ ರಾಜಕೀಯ, ಸಂಗೀತ, ಸಿನಿಮಾ ವಲಯಗಳ ಖ್ಯಾತಿವಂತರು ಹೆಚ್ಚುಕಡಿಮೆ ರಂಜಿತಾ ಥರವೇ ಡಿಸ್ಟರ್ಬ್ ಆಗುತ್ತಿದ್ದರು. ಅದರಲ್ಲಿ ಒಂದು ಟಿಪಿಕಲ್ ಮಾದರಿಯಿರುವಂತಿತ್ತು: ಸಾರ್ವಜನಿಕ ವಲಯದಲ್ಲಿರುವ ಇಂಥ ಬಹುತೇಕರು ತಮ್ಮನ್ನು ಎಲ್ಲರೂ ಮೆಚ್ಚಬೇಕು ಎಂಬ ಹಪಹಪಿಯಲ್ಲೇ ಇರುತ್ತಿದ್ದರು. ಈಚಿನ ವರ್ಷಗಳಲ್ಲಿ ಎಷ್ಟೋ ಸಲ ಮಲ್ಲಿಕಾಗೂ ಹಾಗೇ ಆಗುತ್ತಿತ್ತು. ಮಲ್ಲಿಕಾ ನಿತ್ಯ ಗಮನಿಸುತ್ತಿದ್ದ ಮೆಕ್ಯಾನಿಕ್, ಬಡಗಿ, ಹೂ ಕಟ್ಟುವ ಹುಡುಗಿ... ಎಲ್ಲರಲ್ಲೂ ಮೆಚ್ಚುಗೆಯ ಕಾತರ ಇದ್ದರೂ, ಅದು ಖ್ಯಾತಿವಂತರಲ್ಲಿ ಕಾಣುವಂತೆ ಎಂದೂ ಕಾಯಿಲೆಯ ಮಟ್ಟ ತಲುಪಿದಂತಿರಲಿಲ್ಲ... ಈ ಥರದ ಖ್ಯಾತಿವಂತರ ಜೊತೆ ಒಡನಾಡುತ್ತಾ, ಈ ಬಗೆಯ ಕಾತರ ಕಳೆದೆರಡು ವರ್ಷಗಳಿಂದ ತನ್ನೊಳಗೂ ಕಾಯಿಲೆಯ ರೀತಿಯಲ್ಲಿ ಮೆಲ್ಲಗೆ ಹಬ್ಬುತ್ತಿದ್ದುದು ಮಲ್ಲಿಕಾಗೆ ಗೊತ್ತಾಗತೊಡಗಿತ್ತು. ರಂಜಿತಾಳಲ್ಲಂತೂ ಅದು ವಾಸಿಯಾಗದ ಹುಣ್ಣಿನಂತೆ ಬೆಳೆಯತೊಡಗಿತ್ತು.

ರಂಜಿತಾ ಜೊತೆಗಿನ ಮಾತುಕತೆಯನ್ನು ರಮೇಶನ ಜೊತೆ ಮಾತ್ರ ಹಂಚಿಕೊಳ್ಳುತ್ತಿದ್ದ ಮಲ್ಲಿಕಾಳ ನಡೆನುಡಿಯ ಮೇಲೆ ಈ ಮಾತುಕತೆಗಳ ಅಡ್ಡ ಪರಿಣಾಮವನ್ನು ಅವನೇ ಒಮ್ಮೆ ಗುರುತಿಸಿದ್ದ: 'ಖ್ಯಾತ ನಟಿಯ ಸಮಸ್ಯೆಗಳನ್ನು ಕೇಳಿ ಕೇಳಿ ನೀನೇ ಪೇಶೆಂಟ್ ಆಗ್ತಾ ಇದೀಯ!' ಎಂದ ರಮೇಶ್, ಇನ್ನೊಂದು ದಿನ, 'ಈಗಂತೂ ರಂಜಿತಾ ಸೇನ್ ತದ್ರೂಪಿ ಥರ ಕಾಣ್ತಾ ಇದೀಯ!' ಎಂದಿದ್ದ. ಆ ಮಾತಿಗೆ ಮಲ್ಲಿಕಾ ರೇಗಿದ ತಕ್ಷಣ, 'ಐ ಮೀನ್... ಬ್ಯೂಟಿಯಲ್ಲಿ!' ಎಂದು ಅವಳನ್ನು ತಬ್ಬಿಕೊಂಡು ಉಬ್ಬಿಸುತ್ತಾ ರಮೇಶ್ ಮಾತು ತೇಲಿಸಿದ್ದರೂ, 'ತದ್ರೂಪಿ' ಎಂಬ ವರ್ಣನೆಯಲ್ಲಿದ್ದ ಸತ್ಯ ಮಲ್ಲಿಕಾಗೆ ತಾಕಿತು: ಯಾಕೆಂದರೆ, ಈಚೀಚೆಗೆ ರಂಜಿತಾಸೇನ್ ಎಂಬ ಪ್ರಖ್ಯಾತ ನಟಿ ಮಲ್ಲಿಕಾಗೆ ತನ್ನೆದುರಿಗಿನ ಕನ್ನಡಿಯಂತೆ ಕಾಣತೊಡಗಿದ್ದಳು. ರಂಜಿತಾ ಹೇಳುತ್ತಿದ್ದ ಒಂದೊಂದು ಘಟನೆಯಲ್ಲೂ ಮಲ್ಲಿಕಾಗೆ ತನ್ನ ಮುಖಗಳೇ ಕಾಣತೊಡಗಿದ್ದವು. ಇದೆಲ್ಲಕ್ಕಿಂತ ವಿಚಿತ್ರವಾಗಿ, ರಂಜಿತಾ ಸಾವಿನತ್ತ ಹೆಜ್ಜೆ ಇಡುವ ಮೊದಲೇ ತಾನೇ ಆ ಹೆಜ್ಜೆ ಇಡಬಯಸಿದ್ದು ಮಲ್ಲಿಕಾಳನ್ನು ದಂಗುಬಡಿಸತೊಡಗಿತು. ಇಷ್ಟು ದುರ್ಬಲವಾಗಿ ಯೋಚಿಸತೊಡಗಿರುವ ತನಗೆ ಕಾಲೇಜಿನಲ್ಲಿ ಕಲಿತ ಫೆಮಿನಿಸಮ್ಮಿನ ಮೊದಲ ಪಾಠಗಳು ಕೂಡ ಸರಿಯಾಗಿ ಅರ್ಥವಾದಂತಿಲ್ಲ ಎಂಬ ಸತ್ಯ ಮಲ್ಲಿಕಾ ಮುಖಕ್ಕೆ ರಾಚತೊಡಗಿತು.

ತನ್ನ ಫೆಮಿನಿಸಮ್ಮೆಲ್ಲ ರಮೇಶನ ಮಾತು, ನಡವಳಿಕೆಗಳ ಬಗೆಗಿನ ಸಣ್ಣಪುಟ್ಟ ಟೀಕೆಗಳಲ್ಲೇ ಕೊನೆಯಾಗಿಬಿಟ್ಟಿತಲ್ಲ ಎನಿಸಿ ಮಲ್ಲಿಕಾಗೆ ಪಿಚ್ಚೆನ್ನಿಸಿತು. ಅವತ್ತು ರಮೇಶ್ ಇದ್ದಕ್ಕಿದ್ದಂತೆ ಕೆಲಸ ಬಿಟ್ಟೆನೆಂದು ಹೇಳಿದ ದಿನ, ಅದಕ್ಕೇನು ಕಾರಣವೆಂಬುದನ್ನು ಮೊದಲು ತನಗೇಕೆ ಹೇಳಲಿಲ್ಲವೆಂದು ಮಲ್ಲಿಕಾ ರೇಗಿ ಎದ್ದು ಹೊರಟುಹೋಗಿದ್ದಳು. ಆದರೆ, ನಿನ್ನೆ ನಡುರಾತ್ರಿ ತಾನು ಒಂದು ಮೆಸೇಜಿನಲ್ಲಿ ಹೆಚ್ಚುಕಡಿಮೆ ರಾಜೀನಾಮೆಯನ್ನೇ ಬಿಸಾಕಿದ್ದಕ್ಕೆ ದೊಡ್ಡ ಕಾರಣವೇ ಇರಲಿಲ್ಲ! ಅವತ್ತು ಅವನು ರಾಜೀನಾಮೆ ಬಿಸಾಕಿ ಬಂದದ್ದಕ್ಕೂ ಇಂಥದ್ದೇ ಕಾರಣವೋ, ಇದಕ್ಕಿಂತ ದೊಡ್ಡ ಕಾರಣವೋ ಇರಬಹುದು. ಅದನ್ನು ಕೂತು ವಿಚಾರಿಸದೆ, ಧಡಕ್ಕನೆ ಅವನ ಫ್ಲ್ಯಾಟಿನಿಂದ ಹೊರಬಿದ್ದದ್ದು ನೆನಪಾಗಿ